ಕರ್ನಾಟಕ ವಿಧಾನ ಸಭೆ

ಮಂಗಳವಾರ 6ನೇ ಸೆಪ್ಟೆಂಬರ್ 1983, ಶ್ರಾವಣ ಬ॥ 14, ಶಾ. ಶಕ 1905

ವಿಧಾನಸೌಧದಲ್ಲಿರುವ ವಿಧಾನಸಭಾ ಸಭಾಂಗಣದಲ್ಲಿ ಸದನವು
ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ: ತುಂಗಭದ್ರಾ ನದಿಯಿಂದ ಒಂದೇ ಏತ ನೀರಾವರಿಯಿಂದ ಡಂಬಳ ಮುಂತಾದ ಆರು ಕೆರೆಗಳಿಗೆ ನೀರು ಪೂರೈಸುವ ಯೋಜನೆ.

ಪ್ರ. 264 (19) ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;—

(ಅ) ಮುಂಡರಗಿ ತಾಲ್ಲೂಕು (1) ಡಂಬಳ ಕೆರೆ, (2) ಜಂಡ್ಲಿಸಿರೂರು ಕೆರೆ, (3) ಅಲೂರು ಕೆರೆ, (4) ವಡ್ರಹಟ್ಟಿ ಕೆರೆ, (5) ಸಿರೋಳ ಕೆರೆ, (6) ತಾಮ್ರಗುಂಡಿ ಕೆರೆಗಳಿಗೆ ನೀರು ಮಳೆಯಾಗದೇ ಬಾರದಿರುವುದರಿಂದ ರೈತರಿಗೆ ತೊಂದರೆಯಾಗಿರುವುದರಿಂದ ರೈತ ಮತ್ತು ಲೋಕಸಭಾ ಸದಸ್ಯರ ಮನವಿಯ ಪ್ರಕಾರ ತುಂಗಭದ್ರಾ ನದಿಯಿಂದ ಒಂದೇ ಒಂದು ಏತ ನೀರಾವರಿ ಯೋಜನೆಯಿಂದ ನೀರು ಒದಗಿಸುವ ಯೋಜನೆ ತಯಾರಾಗಿದ್ದು ಸ್ಥಳ ಪರಿಶೀಲನೆ ಮಾಪನೆಯಾಗಿದ್ದು ಯಾವ ಹಂತದಲ್ಲಿದೆ;

(ಆ) ಸದರಿ ಆರು ಕೆರೆಗಳಿಗೆ ನೀರು ಒದಗಿಸಿದರೆ ಪ್ರತಿಯೊಂದು ಕೆರೆಯಿಂದ ಎಷ್ಟು ಎಕರೆಗೆ ಖಚಿತ ನೀರು ಒದಗಿಸಲು ಸಾಧ್ಯವಾಗುವುದು?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು).—

(ಅ) ಮುಂಡರಗಿ ತಾಲ್ಲೂಕಿನ ಈ ಕೆರೆಗಳಿಗೆ ತುಂಗಭದ್ರಾ ನದಿಯಿಂದ ಏತ ನೀರಾವರಿ ಯೋಜನೆಯ ಮೂಲಕ ನೀರನ್ನು ಒದಗಿಸಲು ಪೂರ್ವಭಾವಿ ತನಿಖಾ ವರದಿಯನ್ನು 1981 ರಲ್ಲಿ ತಯಾರಿಸಲಾಗಿತ್ತು. ಆದರೆ ಈ ಯೋಜನೆಯು ಯಾವ ಕಾರ್ಯಕ್ರಮದಲ್ಲೂ ಸೇರಿಲ್ಲವಾದುದರಿಂದ ಮುಂದಿನ ಕ್ರಮ ತೆಗೆದು ಕೊಳ್ಳಲಿಲ್ಲ.

(ಆ) ವಿವರವಾದ ತನಿಖೆ ಕೈಗೊಳ್ಳದೆ ಇರುವುದರಿಂದ ಈ ಪ್ರಶ್ನೆಗೆ ಉತ್ತರ ಕೊಡುವ ಸಾಧ್ಯತೆ ಇಲ್ಲ.

ಶ್ರೀ ಕೆ. ಹೆಚ್. ಕುರುಡಗಿ.—ಸ್ವಾಮಿ, ನನ್ನ ಪ್ರಶ್ನೆ (ಅ) ಗೆ ಉತ್ತರವಾಗಿ ಮುಂಡರಗಿ ತಾಲ್ಲೂಕಿನಲ್ಲಿ ಕೆಲವು ಕೆರೆಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ತುಂಗಭದ್ರಾ ನದಿಯಿಂದ ನೀರನ್ನು ಒದಗಿಸಲು ಪೂರ್ವಭಾವಿ ತನಿಖಾ ವರದಿಯನ್ನು 1981 ರಲ್ಲಿ ತಯಾರಿಸಲಾಗಿತ್ತು ಎಂದು ಹೇಳಿದ್ದೀರಿ. ಅದನ್ನು ಮುಂದೆ ಯಾವ ಯೋಜನೆಯಲ್ಲೂ ತೆಗೆದುಕೊಂಡಿಲ್ಲ ಎಂದು ಹೇಳಿದ್ದೀರಿ. ಮುಂದೆ ಯಾವ ಒಂದು ಯೋಜನೆಯಲ್ಲಾದರೂ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ 500 ಅಡಿಯವರೆಗೆ ಪಂಪ್‌ಸೆಟ್ ಮೂಲಕ ನೀರನ್ನು ಎತ್ತಬೇಕು ಅಂದರೆ ಅದು ಆಗುವುದಿಲ್ಲ. ಸುಮಾರು 20–30 ಅಡಿ ಚಾನಲ್ ಹಾಕಬೇಕಾಗುತ್ತದೆ. ಆದ್ದರಿಂದ, ಇದು ಸಾಧ್ಯವಿಲ್ಲ.

ವಿಷಯ: ಸಿ. ಎನ್. ಹಳ್ಳಿ ತಾಲ್ಲೂಕು, ಸಿಂಗದಹಳ್ಳಿಯಲ್ಲಿ ನೀರಾವರಿ ಪಿಕ್‌ಅಪ್ ನಿರ್ಮಾಣದ ಕುರಿತಾಗಿ.

ಪ್ರ. 265 (11) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಸಿಂಗದಹಳ್ಳಿ ಕೆರೆಯಿಂದ ಗಳಿಗೆ ಕೆರೆ ಅಚ್ಚುಕಟ್ಟಿಗೆ ನೀರೊದಗಿಸುವುದು ಕಷ್ಟವಾಗಿ ಬೆಳೆಗಳು ನಷ್ಟವಾಗುತ್ತಿರುವುದರಿಂದ ಸರ್ಕಾರವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಿಂಗದಹಳ್ಳಿಯಲ್ಲಿ ಒಂದು ನೀರಾವರಿ ಪಿಕ್‌ಅಪ್ ಕೆಲಸ ತೆಗೆದುಕೊಳ್ಳಬಲ್ಲದೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು).—ಸಿಂಗದಹಳ್ಳಿಯಲ್ಲಿ ಪಿಕ್‌ಅಪ್‌ದ ವಿಷಯವು ಸರ್ಕಾರದ ಪ್ರಸ್ತಾವನೆಯಲ್ಲಿ ಇಲ್ಲ.

ಶ್ರೀ ಬಿ. ಗಂಗಣ್ಣ.—ಸ್ವಾಮಿ, ಸಿಂಗದಹಳ್ಳಿ ಕೆರೆ ಅಚ್ಚುಕಟ್ಟಿಗೆ ನೀರಿನ ಕೊರತೆಯಿರುವುದರಿಂದ, ಅಲ್ಲಿ ಒಂದು ಪಿಕ್‌ಅಪ್ ಕಟ್ಟಿ, ಅಲ್ಲಿಯ ಕೊರತೆ ನೀಗಿಸಬೇಕೆಂದು ಬಹಳ ವರ್ಷದ ಒಂದು ಕೋರಿಕೆ ಇದೆ. ಇದು

ಚಿಕ್ಕನಾಯಕನಹಳ್ಳಿ, ಗುಬ್ಬಿ, ಎರಡು ಸಬ್-ಡಿವಿಜನ್‌ಗೆ ಸಂಬಂಧಪಟ್ಟಿರುವುದರಿಂದ, ಎಲ್ಲಾದರೂ ಒಂದು ಕಡೆ ಪ್ರಪೋಸಲ್ ವರ್ಕ್‌ಅಪ್ ಆಗಿರಬೇಕು. ಅದನ್ನು ತರಿಸಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದರಲ್ಲಿ 750 ಎಕರೆ ಅಚ್ಚುಕಟ್ಟು ಇದೆ. ಈಗ ಇರತಕ್ಕ ಅಚ್ಚುಕಟ್ಟಿಗೆ ಕೆರೆ ಹೂಳು ತುಂಬಿರುವುದರಿಂದ ನೀರು ಸಾಕಾಗುವುದಿಲ್ಲ. ಅಲ್ಲಿ ಚನ್ನಿಹಳ್ಳ ನಾಲೆ ಬರುತ್ತದೆ., ಅದಕ್ಕೆ ರಿಜರ್‌ವಾಯರ್ ಟ್ಯಾಂಕ್ ಮಾಡಿ, ಮಾಡಲಿಕ್ಕೆ ಸಾಧ್ಯವಾದರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಗಂಗಣ್ಣ.—ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡಲಿಕ್ಕೆ ಸಾಧ್ಯವೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ರಿಸರ್‌ವಾಯರ್ ಟ್ಯಾಂಕ್ ಮಾಡಲಿಕ್ಕೆ ಸಾಧ್ಯವೇ ಎಂದು ತನಿಖೆ ಮಾಡುತ್ತಿದ್ದಾರೆ, ಆದು ಸಾಧ್ಯವಾದರೆ ಮಾಡಿಸಿಕೊಡುತ್ತೇವೆ.

ವಿಷಯ : ಸ್ಥಳೀಯ ಅಭ್ಯರ್ಥಿ ಜೂನಿಯರ್ ಇಂಜಿನಿಯರ್‌ಗಳನ್ನು ಖಾಯಂಗೊಳಿಸುವ ವಿಚಾರ.

ಪ್ರ. 266 (27) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

(ಅ) ರಾಜ್ಯದಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವ ಜೂನಿಯರ್ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು : ಹಾಗೂ ಎಷ್ಟು ವರ್ಷಗಳಿಂದ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ ;

(ಆ) ಇವರನ್ನು ಖಾಯಂಗೊಳಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) 150. ಸುಮಾರು 10 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

(ಆ) ಈಗಿರುವ ನಿಯಮಾವಳಿಯ ಪ್ರಕಾರ ಈ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಲು ಸಾಧ್ಯವಿಲ್ಲ.

ಶ್ರೀ ಎಂ. ಆನಂದರಾವ್.—ಈಗಿನ ಕಾನೂನು ಪ್ರಕಾರ ಯಾರನ್ನೂ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಜನತಾ ಸರ್ಕಾರ ಬಂದಮೇಲೆ ರೆಕ್ರೂಟ್‌ಮೆಂಟ್ ಕಮಿಟಿ ಮೂಲಕ 600 ಮಂದಿ ಜೂನಿಯರ್ ಇಂಜಿನಿಯರ್ ಆಯ್ಕೆ ಮಾಡಿದ್ದಾರೆ. ಇದರಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಯಾವ ಪ್ರಾಶಸ್ತ್ಯವನ್ನೂ ಕೊಟ್ಟಿಲ್ಲ. ಆದ್ದರಿಂದ, ಈಗಿನ ಕಾನೂನನ್ನು ಬದಲಾಯಿಸಿ ಇವರಿಗೆ ಏನಾದರೂ ಅಬ್ಜಾರ್ಬ್ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಲೋಕಲ್ ಕ್ಯಾಂಡಿಡೇಟ್ಸ್ ನೇಮಕ ಮಾಡತಕ್ಕದ್ದರ ಬಗ್ಗೆ 1973 ನೇ ಇಸವಿ ಏಪ್ರಿಲ್ 1 ನೇ ತಾರೀಖಿ ಸರ್ಕಾರ ಒಂದು ನಿರ್ಣಯ ಹೊರಡಿಸಿದೆ. ಅದು ಏನೆಂದರೆ 1–4–1973 ಕ್ಕೆ ಮುಂಚೆ ಒಂದು ವರ್ಷ ಭರ್ತಿಯಾಗಿದ್ದರೆ, ಅಂತಹವರಿಗೆ ಖಾಯಂಗೊಳಿಸಬೇಕೆಂದು ಆಜ್ಞೆಯ ಹಿನ್ನೆಲೆ ಇದೆ. ಆದರೆ ಈ ಒಂದು ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ, ಮಾನ್ಯ ಸೂರ್ಯನಾರಾಯಣರಾವ್ ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಲೋಕೋಪಯೋಗಿ ಇಲಾಖೆಯಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರ್‌ಗಳು, ಜ್ಯೂನಿಯರ್ ಇಂಜಿನಿಯರ್‌ಗಳು, ಈಗ ಯಾರು ಯಾರು 10 ವರ್ಷಗಳವರೆಗೆ ಕೆಲಸ ಮಾಡಿದ್ದಾರೆ ಅವರುಗಳಿಗೆ ಇನ್‌ಕ್ರಿಮೆಂಟ್‌ಗಳನ್ನು ಕೂಡ ಕೊಟ್ಟು ಕೊಂಡು ಬಂದಿದ್ದಾರೆ. ಇವರುಗಳನ್ನು ಖಾಯಂ ಮಾಡತಕ್ಕದ್ದು ಪರಿಶೀಲನೆಯಲ್ಲಿದೆ. ಇದು ಪ್ರತ್ಯೇಕ, ಜನರಲ್ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಇದು ಅಪ್ಲೈ ಆಗುವುದಿಲ್ಲ.

ವಿಷಯ : ಬಾಗಲಕೋಟೆ ನವನಗರ ನಿರ್ಮಾಣದ ಬಗ್ಗೆ.

ಪ್ರ. 267 (41) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ* (ಗುಲೇದ್‌ಗುಡ್ಡ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬಾಗಲಕೋಟೆ ನಗರವನ್ನು ಕರ್ನಾಟಕದ ಚಂದೀಘಡ ಮಾದರಿಯ ನಗರವನ್ನಾಗಿ ಕಟ್ಟುವ ವಿಚಾರ ಸರ್ಕಾರದವರಿಗೆ ಇದೆಯೇ ;

(ಆ) ಹಾಗಿದ್ದಲ್ಲಿ ಆದರ ವಿವರಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಬಾಗಲಕೋಟೆ ನಗರವನ್ನು ಸ್ಥಳಾಂತರಿಸಲು ಸರ್ಕಾರ ಈಗಾಗಲೇ ಆಜ್ಞೆಯನ್ನು ಹೊರಡಿಸಿದೆ. ಆ ಆಜ್ಞೆಯಂತೆ ಸರ್ಕಾರವು ಒಂದು ಕಾರ್ಯಾಚರಣೆ ಯೋಜನಾ ಸಮಿತಿಯನ್ನೂ (Action Plan Committee) ಮತ್ತು ಬಾಗಲಕೋಟೆ ನಗರ ಅಭಿವೃದ್ಧಿ ಮಂಡಲಿಯನ್ನೂ (Bagalkot Town Development Authority) ರಚಿಸಿದೆ. ಕಾರ್ಯಾಚರಣೆ ಯೋಜನಾ ಸಮಿತಿಯು ಈ ಕೆಳಕಂಡ ವಿಷಯಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕಾಗಿದೆ:

(1) ಬಾಲಕೋಟೆ ನಗರವನ್ನು ಸ್ಥಳಾಂತರಿಸುವ ವಿಷಯದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಗುರುತಿಸಿ ಅದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳು.

---

*ಮಾನ್ಯ ಸದಸ್ಯರು ಹಾಜರಿರಲಿಲ್ಲ.